ದಿನಾಂಕ: 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಬಿ.ಆರ್.ಕೆ ಅರ್ಜಿದಾರ ಪರ ವಕೀಲರಿಂದಃ**

ಈ ಕೆಳಗಿನಂತೆ ಮುಂದುವರೆದ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇನೆ.

| | |
|---|---|
| Ex.P.24 | Copy of spot panchanama |
| Ex.P.25 | Copy of vehicle seizer mahazar |
| Ex.P.26 | Copy of MVA report |
| Ex.P.27 | Copy of charge sheet |

**ಪಾಟಿ ಸವಾಲು: 2ನೇ ಎದುರುದಾರ ಪರ ವಕೀಲರಾದ ಶ್ರೀ ಎಮ್.ಎಮ್.ಕೆ ರವರಿಂದ**:

1) ನಾನು ಅನಕ್ಷರಸ್ಥನಾಗಿರುತ್ತೇನೆ. ನನಗೆ ಸಂಬಂಧಪಟ್ಟ ಆಧಾರ ಕಾರ್ಡ್, ಚುನಾವಣಾ ಗುರುತಿನ ಚೀಟಿ ಇತ್ಯಾದಿಗಳು ಮಾನ್ಯ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ ಎಂದರೆ ಸರಿ. ನನಗೆ ಈಗ 60 ವರ್ಷ ವಯಸ್ಸಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಆಧಾರ ಕಾರ್ಡ್ ಪ್ರಕಾರ ನನ್ನ ವಯಸ್ಸು ಅಪಘಾತವಾದ ವರ್ಷದಂದು 58 ವರ್ಷ ಆಗಿತ್ತು ಎಂದರೆ ಸರಿಯಲ್ಲ.

2) ಅಪಘಾತವಾದ ದಿನ ಸಂಗನಕೇರಿಯಿಂದ ಕಲ್ಲೋಳ್ಳಿ ಗ್ರಾಮಕ್ಕೆ ನಾನು ಮತ್ತು ನನ್ನ ಹೆಂಡತಿ ಮೋಟಾರ್ ಸೈಕಲ್ ಮೇಲೆ ಹೋಗುತ್ತಿದ್ದೇವು. ನನಗೆ ಅಪಘಾತವಾದ ದಿನಾಂಕ ನೆನಪಿಲ್ಲಾ. ಮೋಟಾರ್ ಸೈಕಲ್ ನನ್ನ ಹೆಂಡತಿಯ ತಮ್ಮನಿಗೆ

ಸಂಬಂಧಪಟ್ಟಿರುತ್ತದೆ. ಸದರಿ ಮೋಟಾರ್ ಸೈಕಲ್ ನಂಬರ ನನಗೆ ನೆನಪಿಲ್ಲ. ನಮಗೆ ಅಪಘಾತಪಡಿಸಿರುತ್ತದೆ ಎಂದು ಹೇಳಿದ ಗಾಡಿ ಟ್ರ್ಯಾಕ್ಟರ ಇದ್ದು, ಸದರಿ ಟ್ರ್ಯಾಕ್ಟರ ನಮ್ಮ ಹಿಂದಿನಿಂದ ಬರುತ್ತಿತ್ತು. ಸದರಿ ಟ್ರ್ಯಾಕ್ಟರ ನಂಬರ ಮತ್ತು ಅದರ ಮಾಲೀಕರ ಹೆಸರು ನನಗೆ ಗೊತ್ತಿಲ್ಲಾ. ಸದರಿ ಟ್ರ್ಯಾಕ್ಟರಕ್ಕೆ ಟ್ರೇಲರ್ ಇದ್ದು, ಎರಡು ಟ್ರೇಲರಗಳು ಇದ್ದವು. ಸದರಿ ಟ್ರೇಲರಗಳ ನಂಬರ ಮತ್ತು ಮಾಲೀಕರ ಹೆಸರು ನನಗೆ ಗೊತ್ತಿಲ್ಲಾ. ಕಲ್ಲೋಳ್ಳಿ-ಸಂಗನಕೇರಿ ರಸ್ತೆಯು ರಾಜ್ಯ ಹೆದ್ದಾರಿ ಎಂದರೆ ಸರಿ. ಅಲ್ಲಿ ವಾಹನಗಳು ಸಾಕಷ್ಟು ಗಾಡಿಗಳು ಚಲಿಸುತ್ತವೆ ಎಂದರೆ ಸರಿ. ಸಂಗನಕೇರಿಯಿಂದ ಕಲ್ಲೋಳ್ಳಿ ಹೋಗುವ ರಸ್ತೆಯು ಊರ ಬಳಿ ಮಾತ್ರ ಡಿವೈಡರ್ ದಿಂದ ಕೂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ಸಂಗನಕೇರಿಯಿಂದ ಕಲ್ಲೋಳ್ಳಿ ಹೋಗುವ ರಸ್ತೆಯು ಬಿಳಿ ಬಣ್ಣದ ಪಟ್ಟಿಯನ್ನು ಮಧ್ಯ ರಸ್ತೆಯಲ್ಲಿ ಹಚ್ಚಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಸದರಿ ರಸ್ತೆಯಲ್ಲಿ ಅಲ್ಲಲ್ಲಿ Hamps ಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲಾ. ಡಿವೈಡರ್, ಬಿಳ್ಳಿ ಬಣ್ಣದ ಪಟ್ಟಿ ಮತ್ತು hamps ಗಳು ಇರುವುದರಿಂದ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ.

3) ನಿಮಗೆ ಯಾವ ಟ್ರೇಲರ್ ಬಂದು ಡಿಕ್ಕಿಪಡಿಸಿರುತ್ತದೆ ಎಂದರೆ ಸಾಕ್ಷಿ ಟ್ರ್ಯಾಕ್ಟರ ನಮ್ಮನ್ನು ದಾಟಿ ಮುಂದೆ ಹೋಗಿದ್ದು, ಅದರ ಅಂಟಿಕೊಂಡು ಎರಡು ಟ್ರೇಲರ್ ಇದ್ದು, ಹಿಂದಿನ 2ನೇ ಟ್ರೇಲರ್ ನಮಗೆ ಡಿಕ್ಕಿಪಡಿಸಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಟ್ರೇಲರ್ ಖಾಲಿ ಇತ್ತು. ಟ್ರೇಲರ್ ಖಾಲಿ ಇದ್ದಕಾರಣ ಟ್ರ್ಯಾಕ್ಟರನ ಚಲನೆಯ ಶಬ್ದ ಜಾಸ್ತಿ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ದ್ವಿಚಕ್ರ ವಾಹನ ಓಡಿಲು ಪ್ರತ್ಯೇಕವಾದ ಎಡಭಾಗದ ಕೊನೆಗೆ ರಸ್ತೆಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ಸದರಿ ದಿನದಂದು ನನ್ನ ಗಂಡ ಮೋಟಾರ್ ಸೈಕಲನ್ನು ರಸ್ತೆಯ ಎಡಭಾಗ ಪಟ್ಟಿಯ ಒಳಗಡೆ ಚಲಿಸುತ್ತಿರಲಿಲ್ಲಾ ಎಂದರೆ ಸರಿಯಲ್ಲ.

4) ಅಪಘಾತವು ನನ್ನ ತಪ್ಪಿನಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಮತ್ತು ನನ್ನ ಹೆಂಡತಿ ಬಿದ್ದಿರುತ್ತವೆ. ಅಪಘಾತವಾದ ನಂತರ ನಮ್ಮನ್ನು ಆಸ್ಪತ್ರೆಗೆ ಯಾರು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿ ಆಜು-ಬಾಜು ಬರುತ್ತಿದ್ದ ಗಾಡಿಯ ಚಾಲಕರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲಾ. ಅವರು ಯಾವ ಗಾಡಿಯಲ್ಲಿ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ಯಾವ ಆಸ್ಪತ್ರೆಗೆ ನಿಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ.

5) ಆಸ್ಪತ್ರೆಯಲ್ಲಿ ನಾನು 15 ದಿನ ಒಳರೋಗಿಯಾಗಿ ದಾಖಲಾಗಿದ್ದೆ. ವೈದ್ಯರು ನನಗೆ ಸಂಪೂರ್ಣವಾಗಿ ಗುಣಮುಖವಾದ ನಂತರ ಬಿಡುಗಡೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಮುಂದುವರೆದ ಚಿಕಿತ್ಸೆಗೆ ಬರಲು ಹೇಳಿ ಬಿಡುಗಡೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವೈದ್ಯರು ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ನಂತರ ಸುಮಾರು 3 ಸಲ ಮುಂದುವರೆದ ಚಿಕಿತ್ಸೆಗೆ ಹೋಗಿರುತ್ತೇನೆ. ಯಾವ ಯಾವ ದಿನಾಂಕದಂದು ಮುಂದುವರೆದ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ನನಗೆ ಹೇಳಲು ಆಗುವುದಿಲ್ಲಾ. ಮುಂದುವರೆದ ಚಿಕಿತ್ಸೆಗೆ ಸಂಬಂಧಿಸಿದಂತೆ ದಾಖಲೆ ಹಾಜರಪಡಿಸಿರುತ್ತೀರಾ? ಎಂದರೆ ಸಾಕ್ಷಿ ಹಾಜರಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

6) ಆಸ್ಪತ್ರೆಯಲ್ಲಿ ರೂ.2 ಲಕ್ಷ ಖರ್ಚು ಮಾಡಿರುತ್ತೇನೆ ಎಂದು ಹೇಳಿ ಬರೆಸಿದ್ದು, ಅದಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರಪಡಿಸಿರುತ್ತೀರಾ? ಎಂದರೆ ಸಾಕ್ಷಿ ಹಾಜರಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹಾಜರಪಡಿಸಿದ ದಾಖಲೆಗಳು ಸೃಷ್ಟಿಸಿಕೊಂಡು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ.

7) ನಾನು ಕಲ್ಲು ಒಡೆಯುವ ಉದ್ಯೋಗ ಮಾಡುತ್ತೇನೆ. ನಾನು ಪ್ರತಿ ತಿಂಗಳು ರೂ.30 ಸಾವಿರ ಗಳಿಸುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲಾ ಎಂದರೆ ಸರಿ. ನಾನು ಅರಭಾಂವಿ ಗುಡ್ಡದಲ್ಲಿ ಕಲ್ಲು ಒಡೆಯುವ ಕೆಲಸ ಮಾಡುತ್ತೇನೆ. ನಾವೇ ಕಲ್ಲು ಒಡೆದು ಅವುಗಳನ್ನು ಮಾರಾಟ ಮಾಡುತ್ತೇವೆ. ಕಲ್ಲು ಒಡೆಯಲು ಪರವಾನಿಗೆ ಬೇಕಾಗುತ್ತದೆ ಎಂದರೆ ಸರಿ. ಈಗಲೂ ನಾನು ಕಲ್ಲು ಒಡೆಯುವ ಉದ್ಯೋಗ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನಾನು ಕಲ್ಲು ಒಡೆಯುವ ಕೆಲಸ ಮಾಡುತ್ತಿದ್ದರೂ ಕೂಡ, ಅಪಘಾತವಾದ ನಂತರ ಕಲ್ಲು ಒಡೆಯುವ ಕೆಲಸ ಮಾಡುತ್ತಿಲ್ಲಾ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8) ನನಗೆ ಅಪಘಾತಕ್ಕಿಂತ ಮುಂಚೆನೂ ಕಿವಿ ಸರಿಯಾಗಿ ಕೇಳುವುದಿಲ್ಲಾ ಎಂದರೆ ಸರಿ. ನನಗೆ ಸರಿಯಾಗಿ ಮಾತನಾಡಲು ಬರುವುದಿಲ್ಲಾ ಎಂದರೆ ಸರಿ. ನನಗೆ ವಾಹನಗಳ ಹಾರ್ನ್ ಹೊಡೆಯುವ ಶಬ್ದ ಕೇಳಿಸುವುದಿಲ್ಲಾ ಎಂದರೆ ಸರಿಯಲ್ಲ. ಅರ್ಜಿ ಸಲ್ಲಿಸುವದಕ್ಕಿಂತ ಮುಂಚೆ ದಾಖಲೆಗಳನ್ನು ಪರಿಶೀಲಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿ. ದೋಷಾರೋಪಣೆ ಪಟ್ಟಿ ಹಾಜರಪಡಿಸಿರುತ್ತೇನೆ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ನಮ್ಮ ಗಾಡಿ ರಸ್ತೆಯ ಮಧ್ಯದಲ್ಲಿ ಇತ್ತು ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಗಾಡಿ ಅಪಘಾತದಲ್ಲಿ ಜಕ್ಕಂಗೊಂಡಿರುತ್ತದೆ ಎಂದರೆ ಸರಿ. ಅಪಘಾತಪಡಿಸಿದ ಗಾಡಿಗೆ ಜಕ್ಕಂ ಆಗಿತ್ತಾ? ಎಂದರೆ ನನಗೆ ಗೊತ್ತಿಲ್ಲಾ. ಅಪಘಾತಪಡಿಸಿದ ವಾಹನಕ್ಕೆ ಯಾವುದೇ ಜಕ್ಕಂ ಆಗಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ನಮ್ಮ ಗಾಡಿ ಯಾವುದೇ ಗಾಡಿಗೆ ಪಡಿಸಿ ತಾನೇ ಬಿದ್ದು, ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾವೇ ಸ್ವತ: ಬಿದ್ದಿದ್ದರಿಂದ ಪರಿಹಾರ ಸಿಗುವುದಿಲ್ಲಾ ಎಂಬ ಕಾರಣದಿಂದ ಎದುರುದಾರ ಗಾಡಿಯು ಡಿಕ್ಕಿಪಡಿಸಿದೆ ಸುಳ್ಳು

ದಾಖಲೆ ಹಾಜರಪಡಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9) ನನಗೆ ಮೋಟಾರ್ ಸೈಕಲ್ ಓಡಿಸಲು ಚಾಲನಾ ಪತ್ರ ಇರುವುದಿಲ್ಲಾ ಎಂದರೆ ಸರಿ. ಅದೇ ರೀತಿ ನಮ್ಮ ಗಾಡಿಗೆ ವಿಮೆ ಪಾಲಿಸಿ ಇರಲಿಲ್ಲಾ ಎಂದರೆ ಸರಿ. ನನಗೆ ಚಾಲನಾ ಪತ್ರ ಇರಲಿಲ್ಲಾ ಮತ್ತು ನಮ್ಮ ವಾಹನಕ್ಕೆ ವಿಮೆ ಇರಲಿಲ್ಲಾ ಎಂಬ ಕಾರಣಕ್ಕಾಗಿ ಪೋಲಿಸರು ನನ್ನನ್ನು ಆರೋಪಿಯಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆ ಹಾಜರಪಡಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸರಿಯಾಗಿ ಗಾಡಿ ಓಡಿಸಲು ಬರದ ಕಾರಣ ನಾನೇ ನನ್ನ ತಪ್ಪಿನಿಂದ ಅಪಘಾತ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗಲೂ ಅಪಘಾತದ ಪೂರ್ವದಲ್ಲಿ ಯಾವ ರೀತಿ ಮೊದಲಿನಂತೆ ಕೆಲಸ ಮಾಡುತ್ತಿದ್ದ ಈಗಲೂ ಅದೇ ರೀತಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲು: 3ನೇ ಎದುರುದಾರ ಪರ ಶ್ರೀ ಎಸ್.ಎಸ್.ಯು ವಕೀಲರಿಂದ:</u>**

ಮೇಲೆ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

10) ಅಪಘಾತವಾದ ನಂತರ ದೂರನ್ನು ನನ್ನ ಮಗ ಕೊಟ್ಟಿರುತ್ತಾರೆ. ನನ್ನ ಮಗ ಕೊಟ್ಟ ದೂರು ಸರಿ ಇರುತ್ತದೆ ಎಂದರೆ ಸರಿ. ದೂರಿನಲ್ಲಿ ಮಾಹಿತಿ ನನಗೆ ತಿಳಿದಿರುತ್ತದೆ. ಸದರಿ ದೂರಿನಲ್ಲಿ ಟ್ರ್ಯಾಕ್ಟರಿಗೆ ಎರಡು ಟ್ರೇಲರ್ ಗಳು ಇದ್ದವು ಎಂದು ಬರೆಯಲಾಗಿದೆ. ದೂರಿನಲ್ಲಿ ಎಷ್ಟು ಟ್ರೇಲರ್ ಇದ್ದವು ಎಂದು ಬರೆದಿಲ್ಲಾ ಎಂದರೆ ಸರಿಯಲ್ಲ. ದೂರಿನಲ್ಲಿ ಟ್ರ್ಯಾಕ್ಟರ ನಂಬರ, ಟ್ರೇಲರ್ ನಂಬರ ಬರೆದಿಲ್ಲಾ ಎಂದರೆ ಗಾಬರಿಯಿಂದ ನಂಬರಗಳನ್ನು ಬರೆದಿಲ್ಲಾ ಎಂದು ನುಡಿಯುತ್ತಾರೆ. ಟ್ರ್ಯಾಕ್ಟರ್ ಮತ್ತು

ಟ್ರೇಲರ್ ಗಳ ಬಣ್ಣದ ಬಗ್ಗೆ ದೂರಿನಲ್ಲಿ ಬರೆದಿಲ್ಲಾ ಎಂದರೆ ಸರಿ. ಟ್ರ್ಯಾಕ್ಟರಗೆ ಎರಡು ಟ್ರೇಲರಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಡಿ ನಂಬರ ಮತ್ತು ಗಾಡಿ ಬಣ್ಣ ಗೊತ್ತಿಲ್ಲದ್ದ ಕಾರಣ ನೀವು ಈ ಗಾಡಿ ಮತ್ತು ಟ್ರೇಲರಗಳನ್ನು ಖೊಟ್ಟಿಯಾಗಿ ಬರೆಸಿರುತ್ತೀರಿ ಎಂದರೆ ಸರಿಯಲ್ಲ. ಈ ಎದುರುದಾರ ಟ್ರೇಲರ್ ಗಾಡಿಗೆ ಟ್ರ್ಯಾಕ್ಟರ ಇರಲಿಲ್ಲಾ ಎಂದರೆ ಸರಿಯಲ್ಲ. ಈ ಎದುರುದಾರ ಟ್ರೇಲರಗೆ ಟ್ರ್ಯಾಕ್ಟರ ಇಲ್ಲದ ಕಾರಣ ಯಾವುದೋ ಟ್ರ್ಯಾಕ್ಟರ ಜೋಡಿಸಿಕೊಂಡು ಖೊಟ್ಟಿ ಅರ್ಜಿ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೋಷಾರೋಪಣೆ ಪಟ್ಟಿಯಲ್ಲಿ ಟ್ರ್ಯಾಕ್ಟರಗೆ ಎರಡು ಟ್ರೇಲರ್ ಇದ್ದವು ಎಂದು ಬರೆದಿಲ್ಲಾ ಎಂದರೆ ಸರಿಯಲ್ಲ. ಟ್ರ್ಯಾಕ್ಟರ ಮತ್ತು ಟ್ರೇಲರ ತಪ್ಪಿನಿಂದ ಅಪಘಾತ ನಡೆದಿಲ್ಲಾ, ನನ್ನ ತಪ್ಪಿನಿಂದ ಅಪಘಾತ ನಡೆದಿರುತ್ತದೆ ಎಂದರೆ ಸರಿಯಲ್ಲ. ಸದರಿ ದಿನದಂದು ಈ ಎದುರುದಾರರ ಟ್ರೇಲರ್ ಅಪಘಾತದ ಸ್ಥಳದಲ್ಲಿ ಇರಲಿಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶಾಂತಮ್ಮ ಮಲ್ಲಿಕಾರ್ಜುನಗೌಡ ಪಿ.)
ಹಿರಿಯ ದಿವಾಣಿ ನ್ಯಾಯಾಧೀಶರು,
ಮೂಡಲಗಿ

ಸಾಕ್ಷಿಯ ಸಹಿ